ಕರ್ನಾಟಕ ವಿಧಾನ ಸಭೆ

ಮಂಗಳವಾರ, 10ನೇ ಏಪ್ರಿಲ್ 1984

ಸದನವು ವಿಧಾನಸೌಧದ ವಿಧಾನಸಭಾ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶ ಗೊಂಡಿತು.

ಸಭಾಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡರವರು) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಅಧ್ಯಕ್ಷರು.—29ನೇ ಪಟ್ಟಿಯಿಂದ ಮುಂದೂಡಲಾದ 414 (1261)ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆ (ಶ್ರೀ ಆರ್. ಎನ್. ನಾಯಕ್)

44ನೇ ಪಟ್ಟಿಯಿಂದ ಮುಂದೂಡಲಾದ 680 (1216)ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆ (ಶ್ರೀ ಆರ್.ಎನ್ ನಾಯಕ್)

44ನೇ ಪಟ್ಟಿಯಿಂದ ಮುಂದೂಡಲಾದ 685 (1356)ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆ (ಶ್ರೀ ವಸಂತ ವಿ. ಸಾಲಿಯನ್)

—ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿರಲಿಲ್ಲ.

ಅಲ್ಪಕಾಲಾವಧಿ ಪ್ರಶ್ನೆ ಸಂಖ್ಯೆ. 5 (30)

ವಿಷಯ : ರಾಮನಾಥಪುರ ಉಪ-ವಿಭಾಗದಲ್ಲಿ ಕೆಲಸ ಮಾಡುವ ಎನ್. ಎಂ. ಆರ್. ಕೆಲಸಗಾರರ ಬಗ್ಗೆ

ಪ್ರ. (5) (30) ಶ್ರೀ ಕೆ. ಬಿ. ಮಲ್ಲಪ್ಪ, ಆರಕಲಗೂಡು :—

ಅ) ಆರಕಲಗೂಡು ತಾಲ್ಲೂಕಿನಲ್ಲಿರುವ ರಾಮನಾಥಪುರದ ಹಾರಂಗಿ ಎಡದಂಡೆ ಉಪನಾಲೆಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 27 ಜನರನ್ನು ಕೆಲಸದಿಂದ ತೆಗೆದು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;—

ಆ) ಅವರುಗಳ ಪೈಕಿ ಅನೇಕ ಮಂದಿ ಡಿಪ್ಲೊಮೋಗಳನ್ನು ಹೊಂದಿದ್ದ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ್ದು ಸುಮಾರು 14-15 ವರ್ಷಗಳಿಂದ ಸೇವೆ ಸಲ್ಲಿಸಿರುವುದು ನಿಜವೆ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು? —

ಶ್ರೀ ಎಚ್. ಡಿ. ದೇವೇಗೌಡ.—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು :—

ಅ) ರಾಮನಾಥಪುರದ ಹಾರಂಗಿ ಎಡದಂಡೆ ಉಪನಾಲೆಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಎನ್.ಎಂ.ಆರ್. ಕೆಲಸಗಾರರನ್ನು ಸೇವೆಯಿಂದ ತೆಗೆದು ಹಾಕಲಿಲ್ಲ. ಆದುದರಿಂದ ಈ ಪ್ರಶ್ನೆಯನ್ನು ಉತ್ತರಿಸುವ ಪ್ರಮೆಯವಿಲ್ಲ.

ಆ) ಇಲ್ಲ.

ಇ) ಪ್ರಶ್ನೆ (1) ಮತ್ತು (2)ಕ್ಕೆ ಉತ್ತರಿಸಿರುವುದರಿಂದ ಇದು ಉತ್ತರಿಸುವ ಪ್ರಮೆಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ 14-15 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಎನ್.ಎಂ. ಆರ್. ಕೆಲಸಗಾರರು ಪರಿಶಿಷ್ಟ ಜಾತಿಗೆ ಸೇರಿದವರು ಯಾರೂ ಇಲ್ಲ. ಈ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ 27 ಕೆಲಸಗಾರರಲ್ಲಿ 26 ಜನರಿಗೆ ಬೇರೆ ಬೇರೆ ಡಿವಿಜನ್‌ಗಳಲ್ಲಿ ಕೆಲಸ ಕೊಟ್ಟಿದ್ದೇವೆ. ಈ ಸಬ್ ಡಿವಿಜನ್ ಅನ್ನು ಉಳಿಸಬೇಕೆಂದು ಹೇಳಿದ್ದಾರೆ. ಇದನ್ನು ಉಳಿಸಬೇಕೇ ಬಿಡಬೇಕೇ ಎನ್ನುವುದರ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳಲಾಗುವುದು. ವರದಿ ಪ್ರಕಾರ ಎನ್. ಎಂ. ಆರ್. ಕೆಲಸಗಾರರು ಯಾರನ್ನೂ ರಿಟ್ರೆಂಚ್ ಮಾಡಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಇವರಲ್ಲಿ ಡಿಪ್ಲೋಮಾ ಹೋಲ್ಡರ್ಸ್ 13-14 ವರ್ಷಗಳಿಂದ ಕೆಲಸ ಮಾಡಿದ ಅಲ್ಪಸಂಖ್ಯಾತರೂ ಇದ್ದಾರೆ. ಅವರನ್ನು ಏತಕ್ಕೆ ತೆಗೆದಿದ್ದೀರಿ? ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ. ಸ್ವಲ್ಪ ಬಿಸಿ ಮಾತುಕತೆ ನಡೆದಿದ್ದಕ್ಕೆ ಬರೆದುಕೊಡಿ ಎಂದು ಹೇಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಇದುವರೆಗೂ ಅವರನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ. ಅವರು ಎಲ್ಲಿಗೆ ಹೋಗಬೇಕು?

ಇವರು ಮೂರು-ನಾಲ್ಕು ಜನ ಏನು ಇದ್ದಾರೆ ಇವರ ಪೈಕಿ ಮುಸ್ಲಿಂ ವರ್ಗಕ್ಕೆ ಸೇರಿದವರು ಒಬ್ಬರಿದ್ದಾರೆ. ಕುರುಬರು ಒಬ್ಬರಿದ್ದಾರೆ. ಇನ್ನೊಬ್ಬರು ಬೇರೆ ಜಾತಿಗೆ ಸೇರಿದವರು ಇದ್ದಾರೆ. ಇವರು 14-15 ವರ್ಷಗಳಿಂದ ಸರ್ವೆ ಕೆಲಸ ಮಾಡಿದ್ದಾರೆ ಹಾಗೂ ಮೇಸ್ತ್ರಿ ಕೆಲಸ ಮಾಡಿದ್ದಾರೆ. ಅವರನ್ನು ಪುನ: ಕೆಲಸಕ್ಕೆ ತೆಗೆದುಕೊಳ್ಳುವ ಹಾಗೆ ತಾವು ಆದೇಶ ನೀಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—1-4-82ರ ಹಿಂದೆ ಕೆಲಸ ಮಾಡಿಕೊಂಡು ಬಂದಿರತಕ್ಕ ಒಬ್ಬರನ್ನೂ ಕೆಲಸದಿಂದ ತೆಗೆಯುವ ಪ್ರಶ್ನೆ ಇಲ್ಲ. ಇದನ್ನು ನಾನು ಮುಂಚೆಯೇ ಸ್ಪಷ್ಟವಾಗಿ ಹೇಳಿದ್ದೇನೆ. 1-4-82 ರಿಂದ ಕೆಲಸ ಮಾಡುವ ಎನ್.ಎಂ.ಆರ್. ಕೆಲಸಗಾರರನ್ನು ಅವರು ಯಾವುದೇ ಜಾತಿಗೆ ಸೇರಿದಲಿ, ಅವರನ್ನು ಕೆಲಸದಿಂದ ತೆಗೆಯುವ ಪ್ರಶ್ನೆ ಇಲ್ಲ. ಒಂದೇ ಒಂದು ವಿಷಯ ಎಂದರೆ ಅವರಿಗೆ ಒಂದೇ ಕಡೆ ಕೆಲಸ ಕೊಡುವುದಕ್ಕೆ ಆಗುವುದಿಲ್ಲ. ಒಂದು ಕಡೆ ಕೆಲಸ ಮುಗಿದ ಮೇಲೆ ಬೇರೆ ಸಬ್-ಡಿವಿಜನ್‌ಗೆ ಹೋಗಲು ಅವರಿಗೆ ಹೇಳಬೇಕಾಗುತ್ತದೆ. ಇಲ್ಲಿನ 27 ಜನರಲ್ಲಿ 26 ಜನರಿಗೆ ಬೇರೆ ಬೇರೆ ಸಬ್-ಡಿವಿಜನ್‌ಗಳಲ್ಲಿ ಕೆಲಸ ಕೊಟ್ಟಿದ್ದೇವೆ. ಮೂರು ಜನ ಮುಸ್ಲೀಮ್, ಕುರುಬ ಅಥವಾ ಬೇರೆ ಯಾರೇ ಇರಲಿ. ಅವರನ್ನು ತೆಗೆದುಹಾಕಿದ್ದರೆ, ಕೆಲಸ ಕೊಡದೇ ಇದ್ದರೆ ಅವರು 1-4-82 ಪೂರ್ವದಲ್ಲಿ ಮೂರು ವರ್ಷ ಕೆಲಸ ಮಾಡಿರಲಿ, ಅಥವಾ ಐದು ವರ್ಷ ಕೆಲಸ ಮಾಡಿರಲಿ ಅವರಿಗೆ ಕೆಲಸ ಕೊಡಿಸುವ ಜವಾಬ್ದಾರಿ ಸರ್ಕಾರದ್ದು. ಅದನ್ನು ಒಗಿದಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

Irrigation Schemes Taken up under Left and Right Bank Canal of Sharavathi River.

Sri R.N. Naik (Bhatkal)—

414 (1271) Will the Minister for Public Works and Irrigation be pleased to state :—

(a) the names of lift irrigation schemes started in the left and right Bank canal of the Sharavathi river, Honnavar Taluk from where water is available for irrigation ;

(b) the number of places identified so far after conducting survey during 1982, 1983 and 1984 for the implementation of lift irrigation schemes in the Left and Right Bank canals of Sharavathi in Honnavar Taluk ;

(c) the reason for not identifying even one place during the said years and whether this is due to the carelessness of the concerned Officers, if so, whether action would be taken against such persons ?

Major Irrigation Projects in the State

Sri R. N. Naik (Bhatkal)—

680 (1216) Will the Minister for Public Works and Irrigation be pleased to state :—

(a) the number of major Irrigation projects in the State and the names of the rivers and places where projects have been constructed ;

(b) the quantum of water that was being supplied by them prior to 1983 ;

(c) the additional hectors of land than before for which water is being supplied from these Irrigation projects since commencement of 1983 till date ?

Prevention of Sea Erosion

Sri Vasanth V. Saliana (Kaupu)—

685 (1356) Will the Minister for Public Works and Irrigation be pleased to state :—